'ಸದ್ಯ ಬಚಾವ್ ಬಚ್ಚ. ಇನ್ನು ನೀನು ಸುಲಭದಲ್ಲಿ ಅಧ್ಯಾತ್ಮ ಕಲಿಯಬಹುದು. ಪರಮಾತ್ಮನ ಬಗ್ಗೆ, ಆತ್ಮನ ಬಗ್ಗೆ, ಅವುಗಳ ಸಂಬಂಧಗಳ ಬಗ್ಗೆ, ಯೋಗದ ಬಗ್ಗೆ, ಮೋಕ್ಷ ಸಾಧನೆಯ ಬಗ್ಗೆ ಎಲ್ಲ ನೀನು ಕಲಿಯಬೇಕು, ಕಲಿಯಬಹುದು. ನಿನಗೆ ಏನು ಸಂಶಯ ಬಂದರೂ ನನ್ನ ಹತ್ರ ಕೇಳು' ಅಂತೆಲ್ಲ ಹೊಗಳಿ ಅವನನ್ನು ಕಳಿಸಿಕೊಟ್ಟರು.

ಬಚ್ಚನನ್ನು ಒಬ್ಬ ವ್ಯಕ್ತಿಯಾಗಿ ರೂಪಿಸಬೇಕು. ಮೊದಲು ಬಚ್ಚ, ನಂತರ ಇಡೀ ಊರು. ಎಲ್ಲ ಊರುಗಳಲ್ಲೂ ನನ್ನಂಥವರು ಒಬ್ಬರಿದ್ದರೂ ಸಾಕು ಇಡೀ ದೇಶ ರಾಮರಾಜ್ಯ. ನಂತರ ನಿತ್ಯ ಎಲ್ಲ ಕಡೆ ಧ್ಯಾನ, ಮೌನ, ಶಾಂತಿ, ಆಹಾ ಎಷ್ಟು ಅದ್ಭುತ ರಾಷ್ಟ್ರ ನಮ್ಮದು ಎಂಬ ಏಕವ್ಯಕ್ತಿ ಚಿಂತನಾ ಬೈಠಕ್‌ನಲ್ಲಿ ಮುಳುಗುತ್ತಲೇ ರಾತ್ರಿಯ ಊಟ ಮುಗಿಸಿದರು. ಸುಮಾರು ಒಂಬತ್ತು ಗಂಟೆ. ಯಾರೋ ಬಾಗಿಲು ಬಡಿದರು.

'ಅಯ್ಯಾ, ನಾನು ಬಚ್ಚ...' ಅಂತ ಕರೆದ ಧ್ವನಿಯಿಂದ ಒಮ್ಮೆಲೇ ಜಾಗೃತಗೊಂಡ ಪ್ರಕಾಶರು ಸಂತೋಷ ಸಾಗರದಲ್ಲಿ ತೇಲಿದರು. ಬಚ್ಚನಲ್ಲೂ ಅಧ್ಯಾತ್ಮ ಪ್ರಜ್ಞೆ ಜಾಗೃತಗೊಂಡಿದೆ ಎಂದರೆ ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ಜಾಗೃತಗೊಂಡ ಹಾಗೆ. ಅದೇ ಸಂತೋಷದ ಅಮಲಿನಲ್ಲಿ ಬಾಗಿಲು ತೆಗೆದು ಅವನೊಂದಿಗೆ ಮಾತಿಗೆ ತೊಡಗಿದರು.

'ಆತ್ಮ ಬೇರೆ ಪರಮಾತ್ಮ ಬೇರೆ ಎಂದರೂ ಸರಿ, ಎರಡೂ ಒಂದೇ ಎಂದರೂ ಸರಿ. ಇಂಬನ ಹಣ್ಣಿನಲ್ಲಿ ತೊಳೆಗಳು ಬೇರೆ ಬೇರೆ ಅಂತ ಗುರ್ತಿಸಲಿಕ್ಕಾಗುತ್ತದಾ! ಆದರೂ ಅದು ಒಂದೇ ಹಣ್ಣಿನದ್ದಲ್ಲವೆ? ಅದನ್ನೇ ದೋಸೆಯೋ, ಇಡ್ಲಿಯೊ ಮಾಡಿದಾಗ ಇದು ಯಾವ ಹಣ್ಣಿನ. ಯಾವ ತೊಳೆಯದ್ದು ಅಂತ ಗುರುತಿಸಲಿಕ್ಕಾಗುತ್ತದಾ? ಇದು ಜನ್ಮಾಂತರದ ವಿಚಾರ... ಇದೆಲ್ಲ ಯೋಚಿಸುವಾಗ ನಿನಗೆ ಗೊಂದಲ ಆಗಬಹುದು, ಆಗಬೇಕು. ಈಗ ಹೇಳು ನಿನ್ನ ಪ್ರಶ್ನೆ ಏನು? ಸಂಶಯ ಏನು? ಏನಿದ್ದರೂ ಕೇಳು.'

'ಅಂಥಾ ದೊಡ್ಡ ವಿಷಯ ಅಲ್ಲ. ನಿಮಗೆ ದೊಡ್ಡದು ಅಂತ ತೋರುತ್ತದೊ ಏನೊ?'

'ಹೇಳು ಹೇಳು.'

'ಏನೋ ಒಂದು ಕೈಕೋಚು ಆಗಿಹೋಯ್ತು. ಊಟ ಮಾಡಿ ವೀಳ್ಯಕ್ಕೆ ಕೂತಾಗ ಕಂಡೆ, ಹೊಗೆಸೊಪ್ಪಿನ ಅಂಡೆ ಖಾಲಿ. ಅವಳು ಯಾರಿಗೋ ಕೊಟ್ಟು ಖಾಲಿ ಮಾಡಿದ್ದು, ತರಲಿಕ್ಕೆ ನನಗೂ ನೆನಪು ಹೋಯ್ತು. ಮತ್ತೇನಿಲ್ಲ, ಒಂಚೂರು ಹೊಗೆಸೊಪ್ಪಿನ ಮೂಳೆ(ದಂಟು) ಇದ್ದರೆ ಕೊಡಿ ಅಂತ ಕೇಳುವ ಅಂತ ಬಂದೆ...' ವಿನೀತನಾಗಿ ಕೇಳಿದ. ಸಿಟ್ಟಿಗೆದ್ದ ರಾಜರು,

'ನೀನು ಈ ಜನ್ಮಕ್ಕೆ ಉದ್ಧಾರ ಆಗುವುದಿಲ್ಲ. ನೀನೂ ಆಗುವುದಿಲ್ಲ, ಈ ದೇಶವೂ ಆಗುವುದಿಲ್ಲ' ಎಂದು ಶಪಿಸುತ್ತ ಹೊಗೆಸೊಪ್ಪಿನ ಮೂಳೆ ಹುಡುಕತೊಡಗಿದರು.

---

## ಸಂಪೂರ್ಣಾನಂದ ಬಳ್ಕೂರು

ಕುಂದಾಪುರ ತಾಲ್ಲೂಕಿನ ಬಳ್ಕೂರು ಸಂಪೂರ್ಣಾನಂದ ಅವರ ಹುಟ್ಟೂರು. ಪ್ರಸ್ತುತ ಮಂಗಳೂರಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಯಕ್ಷಗಾನ ಪ್ರಸಂಗಗಳ ಕುರಿತು ಪಿಎಚ್.ಡಿ ಪ್ರಬಂಧವನ್ನೂ ಮಂಡಿಸಿರುವ ಅವರು, 'ಯಕ್ಷಾಮೃತ' ಎಂಬ ಸಂಶೋಧನಾ ಕೃತಿಯನ್ನು ಪ್ರಕಟಿಸಿದ್ದಾರೆ. ಪ್ರಾದೇಶಿಕ ಸೊಗಡಿನ ಕತೆ ಹಾಗೂ ಪ್ರಬಂಧಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ.